ಓ ಎಸ್ ನಂ.34/2023
ಡಿ.ಡಬ್ಲ್ಯೂ-2 ವಿಠಲ್ ತಂದೆ ಮಲ್ಲಪ್ಪ ಕೋರಳ್ಳಿ

**(ಇಂದು ದಿನಾಂಕಃ 10-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ಶ್ರೀ ಎಸ್ ಎನ್ ಪಿ ವಕೀಲರಿಂದ.

ನಾನು ೧೯೬೭-೬೮ ರಲ್ಲಿ ಕೊಗನೂರ ಗ್ರಾಮಕ್ಕೆ ಬಂದಿರುತ್ತೇನೆ. ಮೊದಲು ನಾನು ಸ್ಟೇಷನ್ ಗಾಣಗಾಪೂರದಲ್ಲಿ ಇದ್ದೆ. ಬಸಪ್ಪ ಮತ್ತು ಅಂಬರಾಯ ಗೊತ್ತು, ಅವರು ಇಬ್ಬರು ಅಣ್ಣ-ತಮ್ಮಂದಿರಾಗಿರುತ್ತಾರೆ. ಅವರಿಬ್ಬರ ನಡುವೆ ಸುಮಾರು ೩೦ ಎಕರೆ ಜಮೀನು ಇರುತ್ತದೆ. ಬಸಪ್ಪ ಮತ್ತು ಅಂಬರಾಯ ಈಗ ಬೇರೆ-ಬೇರೆಯಾಗಿರುತ್ತಾರೆ. ಅವರು ಸುಮಾರು ೧೯೭೩-೭೪ ರಲ್ಲಿ ವಿಭಾಗವಾಗಿರುತ್ತಾರೆ. ಅಂಬರಾಯರವರ ಪಾಲಿಗೆ ಸರ್ವೆ ನಂಬರ ೧೦೦, ಸರ್ವೆ ನಂಬರ ೩೧ ಮತ್ತು ಸರ್ವೆ ನಂಬರ ೩೦ ರ ಜಮೀನುಗಳು ಪಾಲಿಗೆ ಬಂದಿರುತ್ತವೆ. ಸರ್ವೆ ನಂಬರ ೧೦೦ ರಲ್ಲಿ ೧೧ ಎಕರೆ ಜಮೀನು ಅಂಬರಾಯರವರಿಗೆ ಬಂದಿರುತ್ತದೆ. ಸರ್ವೆ ನಂಬರ ೩೧ ರಲ್ಲಿ ೭ ಎಕರೆ ಅಂಬರಾಯರವರ ಪಾಲಿಗೆ ಬಂದಿರುತ್ತದೆ. ಸರ್ವೆ ನಂಬರ ೩೦ ರಲ್ಲಿ ೩ ಎಕರೆ ಜಮೀನು ಅಂಬರಾಯರವರ ಪಾಲಿಗೆ ಬಂದಿರಬಹುದು.

೨. ಬಸಪ್ಪರವರ ಪಾಲಿಗೆ ಸರ್ವೆ ನಂಬರ ೧೦೦ ರಲ್ಲಿ ೯ ಎಕರೆ ಜಮೀನು ಮತ್ತು ಸರ್ವೆ ನಂಬರ ೩೦ ಮತ್ತು ೩೧ ರಲ್ಲಿ ಸುಮಾರು ೧೦ ಎಕರೆ ಜಮೀನು ಅವರ ಪಾಲಿಗೆ ಬಂದಿರುತ್ತದೆ. ಅಂಬರಾಯರವರಿಗೆ ನಿಂಗಣ್ಣ ಮತ್ತು ಸೋಮನಾಥ ಎಂಬ ೨ ಜನ ಮಕ್ಕಳು ಇರುತ್ತಾರೆ. ಅಂಬರಾಯರವರಿಗೆ ಮಹಾದೇವಿ ಎಂಬ ಮಗಳೂ ಕೂಡಾ ಇರುತ್ತಾಳೆ. ಅಂಬರಾಯರವರ ಮಕ್ಕಳ ನಡುವೆ ಪಾಲು ಆಗಿರುವುದಿಲ್ಲ. ವಾದಿ ನಿಂಗಪ್ಪ ಬ್ಯಾಂಕಿನಲ್ಲಿ

ಮ್ಯಾನೇಜರ್ ಆಗಿದ್ದರು ಎಂದರೆ ಸರಿ. ವಾದಿಯ ಹೆಂಡತಿಯ ಕೂಡಾ ನೌಕರಿ ಮಾಡುತ್ತಾರೆ ಎಂದರೆ ಸರಿ. ವಾದಿಗೆ ಹಣದ ತೊಂದರೆ ಇಲ್ಲ ಎಂದರೆ ಸರಿ. ವಾದಿ ನಿಂಗಪ್ಪರವರು ಕಲಬುರಗಿಯಲ್ಲಿ ತಮ್ಮ ಸ್ವಂತ ಹಣದಿಂದ ಮನೆ ಖರೀದಿಸಿರುತ್ತಾರೆ ಎಂದರೆ ಸಾಕ್ಷಿಯು ಸರ್ವೆನಂಬರ ೧೦೦ ರ ಜಮೀನು ಮಾರಾಟ ಮಾಡಿ, ಬಂದ ಹಣದಿಂದ ಮನೆ ಖರೀದಿಸಿರುತ್ತಾರೆ ಎನ್ನುತ್ತಾರೆ. ವಾದಿ ಅಮೀರ ಚೌಧರಿ ಎನ್ನುವವರಿಗೆ ತಮ್ಮ ಜಮೀನನ್ನು ಮಾರಾಟ ಮಾಡಿರುತ್ತಾರೆ. ನಾನು ಸದರಿ ಖರೀದಿ ಪತ್ರಕ್ಕೆ ಸಾಕ್ಷಿದಾರನಾಗಿ ಇರುವುದಿಲ್ಲ. ನಾನು ಸದರಿ ಖರೀದಿ ಪತ್ರವನ್ನು ನೋಡಿರುವುದಿಲ್ಲ. ಎಷ್ಟು ಹಣಕ್ಕೆ ಸದರಿ ಖರೀದಿ ವ್ಯವಹಾರ ಆಗಿದೆ ಎಂದು ನನಗೆ ಗೊತ್ತಿಲ್ಲ.

೩. ಈ ದಾವೆಯಲ್ಲಿ ಸರ್ವೆ ನಂಬರ ೧೦೦, ೩೦ ಮತ್ತು ೩೧ ಜಮೀನುಗಳು ಇರುತ್ತವೆ. ಈ ದಾವೆಯಲ್ಲಿ ಸರ್ವೆ ನಂಬರ ೧೦೦ ರ ಜಮೀನನ್ನು ಬಿಟ್ಟಿರುತ್ತಾರೆ ಎಂದು ನನಗೆ ಯಾರೂ ಹೇಳಿರುವುದಿಲ್ಲ. ನಾನು ನನ್ನ ಪ್ರಮಾಣ ಪತ್ರವನ್ನು ಹೇಳಿ ಬರೆಸಿರುವುದಿಲ್ಲ. ನನ್ನನ್ನು ೧ನೇ ಪ್ರತಿವಾದಿ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ. ೧ನೇ ಪ್ರತಿವಾದಿ ಹೇಳಿದ್ದರಿಂದ ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ. ವಾದಿ ಜಮೀನು ಮಾರಾಟ ಮಾಡಿ ಮನೆ ತೆಗೆದುಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ೧ನೇ ಪ್ರತಿವಾದಿಯ ಮಾತುಕೇಳಿ ಅವರಿಗೆ ಸಹಾಯ ಮಾಡಲು ಒಂದು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.